ATR- 978 GR- 800

(1)

# ಕರ್ನಾಟಕ ಸರ್ಕಾರ
## (ಪೊಲೀಸ್ ಇಲಾಖೆ)
## ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ರವರ ಕಛೇರಿ,
## ಕರ್ನಾಟಕ ರಾಜ್ಯ, ನಂ.02, ನೃಪತುಂಗ ರಸ್ತೆ, ಬೆಂಗಳೂರು – 560001

ದೂರವಾಣಿ ಸಂಖ್ಯೆ: 080-22942820/2826 ಇ-ಮೇಲ್ ವಿಳಾಸ: kspest1co@gmail.com

ಸಂಖ್ಯೆ: 195/ಸಿಬ್ಬಂದಿ-1/2020-21 ದಿನಾಂಕ:13.11.2025

ಇವರಿಗೆ,

ಪೊಲೀಸ್ ಮಹಾನಿರ್ದೇಶಕರು,
ನೇಮಕಾತಿ,
**ಬೆಂಗಳೂರು.**

ಮಾನ್ಯರೇ

ವಿಷಯ: ಸಿವಿಲ್ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳನ್ನು ಭರ್ತಿಮಾಡುವ ಕುರಿತು.

ಉಲ್ಲೇಖ:
1) ಸರ್ಕಾರದ ಪತ್ರ ಸಂಖ್ಯೆ:ಹೆಚ್‌ಡಿ 304 ಪಿಪಿಎಸ್ 2024 ದಿ:11.11.2025
2) ಸರ್ಕಾರದ ಪತ್ರ ಸಂಖ್ಯೆ:ಹೆಚ್‌ಡಿ 149 ಪಿಪಿಎ 2025 ದಿ:10.10.2025
3) ಸರ್ಕಾರದ ಪತ್ರ ಸಂಖ್ಯೆ:ಹೆಚ್‌ಡಿ 108 ಪಿಇಐ 2025 ದಿ:10.10.2025
4) ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 155 ಪಿಪಿಎ 2024 ದಿ:10.10.2025
5) ಸರ್ಕಾರದ ಪತ್ರ ಸಂಖ್ಯೆ:ಒಇ 155 ಪಿಪಿಎ 2024 ದಿ:07.11.2025 ಮತ್ತು 12.11.2025
6) ಈ ಕಛೇರಿ ಪತ್ರ ಸಮ ಸಂಖ್ಯೆ ದಿ:13.10.2025

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ವಿವಿಧ ನಗರ/ಜಿಲ್ಲಾ ಪೊಲೀಸ್ ಘಟಕಗಳಲ್ಲಿ ಕಲ್ಯಾಣ ಕರ್ನಾಟಕೇತರ ಮೀಸಲಾತಿಯಡಿಯಲ್ಲಿ ರಿಕ್ತವಿರುವ ಒಟ್ಟು 3500 ನಾಗರೀಕ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳನ್ನು (ಸಿಪಿಸಿ) ನೇರ ನೇಮಕಾತಿಯ ಮೂಲಕ ಭರ್ತಿಮಾಡಲು ಉಲ್ಲೇಖಿತ ಪತ್ರದಲ್ಲಿ ಸರ್ಕಾರವು ಅನುಮತಿ ನೀಡಿರುತ್ತದೆ.

ಆದ್ದರಿಂದ, ಸರ್ಕಾರದ ಉಲ್ಲೇಖಿತ ಪತ್ರವನ್ನು ಹಾಗೂ ಸದರಿ ಪತ್ರದಲ್ಲಿ ನೇರ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಿರುವ 3500 ಕಲ್ಯಾಣ ಕರ್ನಾಟಕೇತರ ಮೀಸಲಾತಿಯ ನಾಗರೀಕ ಪೊಲೀಸ್ ಕಾನ್ಸ್‌ಟೇಬಲ್ (ಸಿವಿಲ್) ಹುದ್ದೆಗಳನ್ನು ಇಲಾಖೆಯ ವಿವಿಧ ನಗರ/ಜಿಲ್ಲಾ ಘಟಕಗಳಿಗೆ ಹಂಚಿಕೆಮಾಡಿರುವ ಸಂಖ್ಯಾವಾರು ವಿವರವನ್ನು **ಅನುಬಂಧ-ಅ** ರಲ್ಲಿ ತಯಾರಿಸಿ ಈ ಪತ್ರದೊಂದಿಗೆ ಲಗತ್ತಿಸಿದೆ. ಸರ್ಕಾರವು ನೇರ ನೇಮಕಾತಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ನೀಡಿರುವ ನಿರ್ದೇಶನಗಳು ಹಾಗೂ ಪೊಲೀಸ್ ಇಲಾಖೆಯ ನೇರ ನೇಮಕಾತಿಯಲ್ಲಿ ಸಮತಳ ಮೀಸಲಾತಿ, ಕ್ರೀಡಾ ಮೀಸಲಾತಿ ಮತ್ತು ತೃತೀಯ ಲಿಂಗದ ಅಭ್ಯರ್ಥಿಗಳ ನೇಮಕಾತಿಗೆ ಸಂಬಂಧಿಸಿದಂತೆ ಉಲ್ಲೇಖ-2 ರಿಂದ 6 ರ ಪತ್ರಗಳಲ್ಲಿ ನೀಡಿರುವ ನಿರ್ದೇಶನಗಳಂತೆ ಸಂಬಂಧಪಟ್ಟ ಘಟಕಗಳಿಂದ ನೇರ ಹಾಗೂ ಸಮತಳ ವರ್ಗೀಕರಣವನ್ನು ಸ್ಪಷ್ಟ ಬ್ಯಾಕ್‌ಲಾಗ್ ವಿವರಗಳೊಂದಿಗೆ ಪಡೆದು ಸದರಿ ಹುದ್ದೆಗಳ ನೇಮಕಾತಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ನಡೆಸಲು ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಕೋರಲಾಗಿದೆ ಹಾಗೂ ತೃತೀಯ ಲಿಂಗದ ಅಭ್ಯರ್ಥಿಗಳ ಮೀಸಲಾತಿ ಹಾಗೂ ನೇಮಕಾತಿಗೆ ಸಂಬಂಧಿಸಿದಂತೆ ತೆಗೆದುಕೊಳ್ಳಬೇಕಾಗಿರುವ ಕ್ರಮಗಳ ವಿವರವನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ.

ತಮ್ಮ ವಿಶ್ವಾಸಿ,

13/11/25

(ಡಾ|| ಎಂ. ಎ. ಸಲೀಂ, ಐಪಿಎಸ್)
ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್
ಜನರಲ್ ಆಫ್ ಪೊಲೀಸ್

**ಪ್ರತಿ :**
1) ಎಲ್ಲಾ ಪೊಲೀಸ್ ನಗರ ಪೊಲೀಸ್ ಆಯುಕ್ತರುಗಳಿಗೆ.
2) ಎಲ್ಲಾ ಜಿಲ್ಲಾ ಪೊಲೀಸ್ ಅಧೀಕ್ಷಕರುಗಳಿಗೆ (ಕೆಜಿಎಫ್ ಸೇರಿದಂತೆ).

ತಮ್ಮ ಘಟಕಗಳಿಗೆ ಹಂಚಿಕೆ ಮಾಡಿರುವ ಹುದ್ದೆಗಳಿಗೆ ಸಂಬಂಧಿಸಿದಂತೆ ನೇರ ಮತ್ತು ಸಮತಳ ವರ್ಗೀಕರಣವನ್ನು (ಬ್ಯಾಕ್‌ಲಾಗ್ ಹುದ್ದೆಗಳು ಸೇರಿದಂತೆ) ನೇಮಕಾತಿ ವಿಭಾಗಕ್ಕೆ ಒದಗಿಸಲು ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಕೋರಲಾಗಿದೆ.

DGP CONTROL ROOM, BENGALURU
O/o. the DG & IGP, N.T.Road, B'luru-1
Out Messages Received for Transmission
NR No. 978 TH. 1540
Date 14/11/2025 Sign. PCG

Scanned with OKEN Scanner

(8)

**ನೇರ ನೇಮಕಾತಿಯಲ್ಲಿ (ಸೇವಾನಿರತ ಮೀಸಲಾತಿ ಹೊರತುಪಡಿಸಿ) ತೃತೀಯ ಲಿಂಗದ ಮೀಸಲಾತಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಕ್ರಮವಹಿಸುವುದು.**

***

- ಪ್ರಸ್ತುತ ಜಿಲ್ಲಾ/ನಗರ ಘಟಕಗಳ ನೇಮಕಾತಿಗೆ ಹಂಚಿಕೆಮಾಡಲಾಗಿರುವ ನಾಗರಿಕ ಪೊಲೀಸ್ ಕಾನ್ಸ್ ಟೇಬಲ್ ಒಟ್ಟು ಹುದ್ದೆಗಳಲ್ಲಿ ವೃಂದ ಮತ್ತು ನೇಮಕಾತಿ ನಿಮಯಗಳ ಅನುಸಾರ ಪುರುಷ ಮತ್ತು ಮಹಿಳೆಯರಿಗೆ 75:25ರ ಅನುಪಾತದಲ್ಲಿ ಹುದ್ದೆಗಳನ್ನು ವಿಂಗಡಿಸಿಕೊಳ್ಳಬೇಕು.
- ಪುರುಷ ಮತ್ತು ಮಹಿಳಾ ವೃಂದಗಳಿಗೆ 75:25 ಅನುಪಾತದಲ್ಲಿ ವಿಂಗಡಿಸಲಾಗಿರುವ ಹುದ್ದೆಗಳಲ್ಲಿ ತೃತೀಯ ಲಿಂಗದ ಅಭ್ಯರ್ಥಿಗಳ ಮೀಸಲಾತಿ ಹುದ್ದೆಗಳನ್ನು ಚಾಲ್ತಿಯಲ್ಲಿರುವ ನೇರ ಮತ್ತು ಸಮತಳ ಮೀಸಲಾತಿ ನಿಯಮಗಳಂತೆ ಪತ್ಯೇಕವಾಗಿ ಗುರುತಿಸಿಕೊಳ್ಳಬೇಕು.
- ಪುರುಷ ಮತ್ತು ಮಹಿಳಾ ವೃಂದಗಳಲ್ಲಿ ತೃತೀಯ ಲಿಂಗದ ಮೀಸಲಾತಿಗೆ ಗುರುತಿಸಲ್ಪಟ್ಟಿರುವ ಹುದ್ದೆಗಳನ್ನು **ನೇಮಕಾತಿ ಅಧಿಸೂಚನೆಯಲ್ಲಿ ಸದರಿ ಪುರುಷ ಮತ್ತು ಮಹಿಳಾ ವರ್ಗೀಕರಣಗಳಡಿಯಲ್ಲಿ ಪರಿಗಣಿಸದೇ ಪ್ರತ್ಯೇಕವಾಗಿ ತೃತೀಯ ಲಿಂಗದ ಹುದ್ದೆಗಳೆಂದು ಗುರುತಿಸುವುದು.**
- ತೃತೀಯ ಲಿಂಗದ ಹುದ್ದೆಗಳ ಸೇರಿದಂತೆ ಎಲ್ಲಾ ಅಧಿಸೂಚಿತ ಹುದ್ದೆಗಳಿಗೆ ಏಕಕಾಲದಲ್ಲಿ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳುವುದು.
- ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 155 ಪಿಪಿಎ 2024 ದಿನಾಂಕ:10.10.2025ರಲ್ಲಿ ತೃತೀಯ ಲಿಂಗದ ಅಭ್ಯರ್ಥಿಗಳಿಗೆ ನಿಗಧಿಪಡಿಸಿರುವ ದೇಹದಾರ್ಢ್ಯತೆ ಹಾಗೂ ಸಹಿಷ್ಣತೆ ಪರೀಕ್ಷೆಗಳಲ್ಲಿ, ಲಿಖಿತ ಮತ್ತು ವೈದ್ಯಕೀಯ ಪರೀಕ್ಷೆಗಳಲ್ಲಿ ಅರ್ಹರಾದ ತೃತೀಯ ಲಿಂಗದ ಅಭ್ಯರ್ಥಿಗಳನ್ನು ಆಯ್ಕೆಮಾಡುವುದು.
- ಆಯ್ಕೆ ಪ್ರಕ್ರಿಯೆಯಲ್ಲಿ ಅರ್ಹ ತೃತೀಯ ಲಿಂಗದ ಅಭ್ಯರ್ಥಿಗಳು ಲಭ್ಯವಾಗದಿದ್ದಾಗ ಅಥವಾ ತೃತೀಯ ಲಿಂಗದ ಮೀಸಲಾತಿಗೆ ಗುರುತಿಸಲ್ಪಟ್ಟಿರುವಷ್ಟು ಅಭ್ಯರ್ಥಿಗಳು ಲಭ್ಯವಾಗದಿದ್ದಾಗ ಭರ್ತಿಯಾಗದ ಹುದ್ದೆಗಳಲ್ಲಿ ಆಯಾ ಪ್ರವರ್ಗದ ಮಹಿಳಾ ಅಭ್ಯರ್ಥಿಗಳಿಂದ ಮೊದಲಿಗೆ 25% ರಷ್ಟು ಮತ್ತು ನಂತರ ಪುರುಷ ಅಭ್ಯರ್ಥಿಗಳಿಂದ 75% ರಷ್ಟು ಹುದ್ದೆಗಳನ್ನು ಭರ್ತಿಮಾಡಲು ಕ್ರಮವಹಿಸುವುದು.

**ಉದಾಹರಣೆ:**

1) ಹಂಚಿಕೆಮಾಡಲಾಗಿರುವ ಒಟ್ಟು ಹುದ್ದೆಗಳು -100
2) ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ವರ್ಗೀಕರಿಸಲಾದ ಹುದ್ದೆಗಳು

| ಪುರುಷ | ಮಹಿಳೆ | ಒಟ್ಟು |
|---|---|---|
| 75 | 25 | 100 |

3) ಚಾಲ್ತಿಯಲ್ಲಿರುವ ಸಮತಳ ಮತ್ತು ನೇರ ಮೀಸಲಾತಿಯ ಅನುಸಾರ ಹುದ್ದೆಗಳ ಹಂಚಿಕೆ (ಉದಾಹರಣೆಗಾಗಿ ರೋಸ್ಟರ್ ಬಿಂದು 1 ರಿಂದ ಪ್ರಾರಂಭಿಸಲಾಗಿರುತ್ತದೆ)

**ಪುರುಷ (75 ಹುದ್ದೆಗಳಿಗೆ)**

| ವರ್ಗ | ಇತರರು | ಗ್ರಾ.ಅ | ಮಾ.ಸೈ | ಕ.ಮಾ.ಅ | ಯೋ.ಅ | ತೃ.ಲಿಂ.ಅ | ಒಟ್ಟು ಹುದ್ದೆಗಳ ಸಂಖ್ಯೆ |
|---|---|---|---|---|---|---|---|
| ಪ್ರವರ್ಗ–I | 2 | 1 | 0 | 0 | 0 | 0 | 3 |
| ಪ್ರವರ್ಗ–II(ಎ) | 7 | 3 | 1 | 0 | 0 | 0 | 11 |
| ಪ್ರವರ್ಗ– II(ಬಿ) | 2 | 1 | 0 | 0 | 0 | 0 | 3 |
| ಪ್ರವರ್ಗ– III(ಎ) | 2 | 1 | 0 | 0 | 0 | 0 | 3 |
| ಪ್ರವರ್ಗ– III(ಬಿ) | 2 | 1 | 0 | 0 | 0 | 0 | 3 |
| ಪರಿಶಿಷ್ಟ ಜಾತಿ ಪ್ರವರ್ಗ–ಎ | 4 | 1 | 0 | 0 | 0 | 0 | 5 |
| ಪರಿಶಿಷ್ಟ ಜಾತಿ ಪ್ರವರ್ಗ–ಬಿ | 3 | 1 | 0 | 0 | 0 | 0 | 4 |
| ಪರಿಶಿಷ್ಟ ಜಾತಿ ಪ್ರವರ್ಗ–ಸಿ | 3 | 1 | 0 | 0 | 0 | 0 | 4 |
| ಪರಿಶಿಷ್ಟ ಪಂಗಡ | 5 | 1 | 0 | 0 | 0 | 0 | 6 |
| ಸಾಮಾನ್ಯ ಅರ್ಹತೆ | 18 | 9 | 3 | 1 | 1 | 1 | 33 |
| ಒಟ್ಟು | **48** | **20** | 4 | 1 | 1 | 1 | 75 |

Scanned with OKEN Scanner

(2)

| ಅನುಬಂಧ-ಅ | | | | |
|---|---|---|---|---|
| ಸಿಪಿಸಿ ಹುದ್ದೆಯ ನೇಮಕಾತಿಗೆ ಹಂಚಿಕೆ ಮಾಡಲಾಗಿರುವ ಹುದ್ದೆಗಳ ವಿವರ (ಕಲ್ಯಾಣ ಕರ್ನಾಟಕೇತರ ಹುದ್ದೆಗಳು) | | | | |
| ಕ್ರ.ಸಂ | ಘಟಕದ ಹೆಸರು | ಕ್ರೀಡಾ ಮೀಸಲಾತಿ | ಕಲ್ಯಾಣ ಕರ್ನಾಟಕೇತರ | ಒಟ್ಟು |
| 1 | B'Lore city | 105 | 2130 | 2235 |
| 2 | Mysore City | 0 | 70 | 70 |
| 3 | H-D City | 0 | 75 | 75 |
| 4 | M'lore City | 0 | 125 | 125 |
| 5 | Belagavi city | 0 | 0 | 0 |
| 6 | Kalaburagi city | 0 | 0 | 0 |
| 7 | B'lore Dist | 0 | 50 | 50 |
| 8 | Tumkur | 0 | 50 | 50 |
| 9 | Kolar | 0 | 50 | 50 |
| 10 | KGF | 0 | 0 | 0 |
| 11 | Ramanagar | 0 | 0 | 0 |
| 12 | Chikkaballapur | 0 | 50 | 50 |
| 13 | Mysore | 0 | 60 | 60 |
| 14 | Chamarajanagara | 0 | 50 | 50 |
| 15 | Hassan | 0 | 50 | 50 |
| 16 | Kodagu | 0 | 50 | 50 |
| 17 | Mandya | 0 | 50 | 50 |
| 18 | Davanagere | 0 | 50 | 50 |
| 19 | Shivamogha | 0 | 80 | 80 |
| 20 | Chitradurga | 0 | 50 | 50 |
| 21 | Haveri | 0 | 50 | 50 |
| 22 | D.K.Managalore | 0 | 70 | 70 |
| 23 | Udupi | 0 | 100 | 100 |
| 24 | U.K.Karwar | 0 | 50 | 50 |
| 25 | Chikkamangalore | 0 | 50 | 50 |
| 26 | Belgaum | 0 | 0 | 0 |
| 27 | Gadag | 0 | 35 | 35 |
| 28 | Dharwad | 0 | 0 | 0 |
| 29 | Bijapur | 0 | 0 | 0 |
| 30 | Bagalkote | 0 | 0 | 0 |
| 31 | Kalaburgi | 0 | 0 | 0 |
| 32 | Raichur | 0 | 0 | 0 |
| 33 | Bidar | 0 | 0 | 0 |
| 34 | Koppala | 0 | 0 | 0 |
| 35 | Yadagiri | 0 | 0 | 0 |
| 36 | Bellary | 0 | 0 | 0 |
| 37 | Vijayanagar | 0 | 0 | 0 |
| 38 | Railways | 0 | 0 | 0 |
| **TOTAL** | | 105 | 3395 | **3500** |

Scanned with OKEN Scanner

**ಮಹಿಳೆ (25 ಹುದ್ದೆಗಳಿಗೆ)**

| ವರ್ಗ | ಇತರರು | ಗ್ರಾ.ಅ | ಮಾ.ಸೈ | ಕ.ಮಾ.ಅ | ಯೋ.ಅ | ತೃ.ಲಿಂ.ಅ | ಒಟ್ಟು ಹುದ್ದೆಗಳ ಸಂಖ್ಯೆ |
|---|---|---|---|---|---|---|---|
| ಪ್ರವರ್ಗ–I | 1 | 0 | 0 | 0 | 0 | 0 | 1 |
| ಪ್ರವರ್ಗ–II(ಎ) | 3 | 1 | 0 | 0 | 0 | 0 | 4 |
| ಪ್ರವರ್ಗ– II(ಬಿ) | 1 | 0 | 0 | 0 | 0 | 0 | 1 |
| ಪ್ರವರ್ಗ– III(ಎ) | 1 | 0 | 0 | 0 | 0 | 0 | 1 |
| ಪ್ರವರ್ಗ– III(ಬಿ) | 1 | 0 | 0 | 0 | 0 | 0 | 1 |
| ಪರಿಶಿಷ್ಟ ಜಾತಿ ಪ್ರವರ್ಗ–ಎ | 2 | 0 | 0 | 0 | 0 | 0 | 2 |
| ಪರಿಶಿಷ್ಟ ಜಾತಿ ಪ್ರವರ್ಗ–ಬಿ | 1 | 0 | 0 | 0 | 0 | 0 | 1 |
| ಪರಿಶಿಷ್ಟ ಜಾತಿ ಪ್ರವರ್ಗ–ಸಿ | 1 | 0 | 0 | 0 | 0 | 0 | 1 |
| ಪರಿಶಿಷ್ಟ ಪಂಗಡ | 2 | 0 | 0 | 0 | 0 | 0 | 2 |
| ಸಾಮಾನ್ಯಅರ್ಹತೆ | 7 | 3 | 1 | 0 | 0 | 0 | 11 |
| ಒಟ್ಟು | **20** | **4** | **1** | **0** | **0** | **0** | **25** |

4) ಮೇಲ್ಕಂಡಂತೆ ಒಟ್ಟು 100 ಹುದ್ದೆಗಳಲ್ಲಿ 01 ಹುದ್ದೆ ಮಾತ್ರ ತೃತೀಯ ಲಿಂಗದ ಮೀಸಲಾತಿಗೆ ಒಳಪಟ್ಟಿದ್ದು, ಸದರಿ 01 ಹುದ್ದೆಗೆ ನೇರ ಮೀಸಲಾತಿಯನ್ನು (Veritcal Reservation) ಅಳವಡಿಸಿ **ಸದರಿ ಹುದ್ದೆಯನ್ನು ತೃತೀಯ ಲಿಂಗದ ಸಾಮಾನ್ಯ ಅಭ್ಯರ್ಥಿಯಿಂದ** ಭರ್ತಿಮಾಡಬೇಕಾಗಿರುತ್ತದೆ.

5) ಒಂದು ವೇಳೆ ತಮ್ಮ ಘಟಕಗಳಲ್ಲಿನ ಪುರುಷ ಮತ್ತು ಮಹಿಳಾ ವೃಂದಗಳಲ್ಲಿ **ತೃತೀಯ ಲಿಂಗದ ಅಭ್ಯರ್ಥಿಗಳಿಗೆ** ಕೆಳಕಂಡಂತೆ (ಕಲಂ-2 ಮತ್ತು 3ರಲ್ಲಿರುವಂತೆ) ಹುದ್ದೆಗಳು ಲಭ್ಯವಾದಲ್ಲಿ ಕಲಂ-4ರಲ್ಲಿ ವಿವರಿಸಿರುವಂತೆ ತೃತೀಯ ಲಿಂಗದ ಹುದ್ದೆಗಳನ್ನು ಒಟ್ಟಾರೆಯಾಗಿ ಗುರುತಿಸಿ ಪ್ರವರ್ಗವಾರು ನೇಮಕಾತಿ ಪ್ರಕ್ರಿಯೆಗಳನ್ನು ಕೈಗೊಳ್ಳಬೇಕಾಗಿರುತ್ತದೆ.

| ವರ್ಗ | ಮಹಿಳಾ ವರ್ಗೀಕರಣದಲ್ಲಿ ತೃತೀಯ ಲಿಂಗದ ಅಭ್ಯರ್ಥಿಗಳಿಗೆ ಗುರುತಿಸಲ್ಪಟ್ಟಿರುವ ಹುದ್ದೆಗಳು | ಪುರುಷ ವರ್ಗೀಕರಣದಲ್ಲಿ ತೃತೀಯ ಲಿಂಗದ ಅಭ್ಯರ್ಥಿಗಳಿಗೆ ಗುರುತಿಸಲ್ಪಟ್ಟಿರುವ ಹುದ್ದೆಗಳು | **ನೇಮಕಾತಿ ಪ್ರಕ್ರಿಯೆಯಲ್ಲಿ ತೃತೀಯ ಲಿಂಗಕ್ಕೆ ಪರಿಗಣಿಸಿ ಅಧಿಸೂಚಿಸಬೇಕಾಗಿರುವ ಹುದ್ದೆಗಳು** |
|---|---|---|---|
| **01** | **02** | **03** | **02+03= 04** |
| ಪ್ರವರ್ಗ–I | 01 | 01 | 02 |
| ಪ್ರವರ್ಗ–II(ಎ) | 00 | 01 | 01 |
| ಪ್ರವರ್ಗ– II(ಬಿ) | 00 | 01 | 01 |
| ಪ್ರವರ್ಗ– III(ಎ) | 00 | 01 | 01 |
| ಪ್ರವರ್ಗ– III(ಬಿ) | 00 | 01 | 01 |
| ಪರಿಶಿಷ್ಟ ಜಾತಿ ಪ್ರವರ್ಗ–ಎ | 01 | 02 | 03 |
| ಪರಿಶಿಷ್ಟ ಜಾತಿ ಪ್ರವರ್ಗ–ಬಿ | 01 | 01 | 02 |
| ಪರಿಶಿಷ್ಟ ಜಾತಿ ಪ್ರವರ್ಗ–ಸಿ | 00 | 01 | 01 |
| ಪರಿಶಿಷ್ಟ ಪಂಗಡ | 01 | 02 | 03 |
| ಸಾಮಾನ್ಯಅರ್ಹತೆ | 05 | 10 | 15 |
| ಒಟ್ಟು | **9** | **21** | **30** |

Scanned with OKEN Scanner